(ಇಂದು ದಿನಾಂಕ 10-07-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ವಾದಿಗಳ ಪರ ಶ್ರೀ ಡಿ.ಎಸ್.ಬಿ. ವಕೀಲರಿಂದಃ**

ಪ್ರತಿವಾದಿಯ ತಂದೆಯವರಿಗೆ ಭೂನ್ಯಾಯ ಮಂಡಳಿಯಿಂದ ಸ.ನಂ. 188 ರ ಪೈಕಿ 01-25-00 ಮುಂಜೂರು ಆಗಿರುತ್ತದೆ ಎಂದರೆ ಸರಿ. ಸ.ನಂ. 188 ಹಿಸ್ಸಾ 1 ನನ್ನ ತಂದೆಯವರ ಹಕ್ಕಿಗೆ ಮತ್ತು ಸ.ನಂ. 188 ಹಿಸ್ಸಾ 2 ವಾದಿಯವರ ಹಕ್ಕಿಗೆ ಪಹಣಿ ಆಗಿರುತ್ತದೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಯಲ್ಲಿ ಸ.ನಂ. 188 ಹಿಸ್ಸಾ 1 ಪ್ರತಿವಾದಿಯ ತಂದೆಯವರ ಹೆಸರಿಗೆ ಮತ್ತು ಸ.ನಂ. 188 ಹಿಸ್ಸಾ 2 ವಾದಿಯವರ ಹೆಸರಿಗೆ ಈಗಿನವರೆಗೆ ಮುಂದುವರೆದುಕೊಂಡು ಬಂದಿರುತ್ತದೆ. ನಿ.ಡಿ. 5 ಪ್ರತಿವಾದಿಗೆ ಸಂಬಂಧಪಟ್ಟ ಸ.ನಂ. 188 ಹಿಸ್ಸಾ 1 ರ ಗಡಿ ಗುರುತು ಮೋಜಣಿ ಆಗಿರುತ್ತದೆ ಎಂದರೆ ಸರಿ. ನಿ.ಡಿ. 5 ರ ನಕಾಶೆಯಂತೆ ಮೋಜಣಿ ಮಾಡುವಾಗ ವಾದಿಯರಿಗೆ ನೋಟಿಸನ್ನು ನೀಡಲಾಗಿರುತ್ತದೆ. ನಿ.ಡಿ. 5 ರ ಮೋಜಣಿ ಸುಮಾರು 4 ತಿಂಗಳ ಹಿಂದೆ ಮಾಡಲಾಗಿರುತ್ತದೆ. ನಿ.ಡಿ. 5 ರ ಮೋಜಣಿ ಮಾಡುವಾಗ ವಾದಿಯವರಿಗೆ ನೊಟೀಸನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ. 5 ರ ಪ್ರಕಾರ ಮೋಜಣಿ ಮಾಡುವಾಗ ಸ.ನಂ. 188 ಹಿಸ್ಸಾ 2 ಮೋಜಣಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಿ.ಡಿ. 5 ರ ಮೋಜಣಿ ಮಾಡುವಾಗ ವಾದಿಯವರಿಗೆ ನೊಟೀಸ್ ನೀಡಿದ ಬಗ್ಗೆ ನಾನು ಭೂಮಾಪನ ಇಲಾಖೆಯಿಂದ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ. ಸದರಿ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ. ನಿ.ಡಿ. 12 ರಿಂದ 22 ದಾವಾ ಸ್ವತ್ತಿಗೆ ಸಂಬಂಧಪಟ್ಟ ಫೊಟೋಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸೇರಿರುವ ಸ.ನಂ. 188 ಹಿಸ್ಸಾ 2 ರ ಪೂರ್ವ ದಿಕ್ಕಿನ 5 ಗುಂಟೆ ಜಾಗವನ್ನು ನಾನು ಅತೀಕ್ರಮಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯವರ ಅತೀಕ್ರಮಣ ಮಾಡಿದ ಜಾಗವನ್ನು ನಾನು ಖುಲ್ಲಾ ಪಡಿಸಿ ಕಬ್ಜಾ ಕೊಡಬೇಕೆಂದು ತಿಳಿಸಿ ದಿಃ 04-05-2018 ರಂದು

ವಾದಿಯವರು ನನಗೆ ನಿ.ಪಿ. 4 ರಂತೆ ನೊಟೀಸನ್ನು ನೀಡಿದ್ದಾರೆ ಎಂದರೆ ಸರಿ. ನಿ.ಪಿ. 4 ಕ್ಕೆ ನಾನು ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿ. ಈ ದಾವಾದಲ್ಲಿ ಸ.ನಂ. 188 ಹಿಸ್ಸಾ 1 ಮತ್ತು 188 ಹಿಸ್ಸಾ 2 ರ ಜಾಗಕ್ಕೆ ಸಂಬಂಧಿಸಿದಂತೆ ಅತೀಕ್ರಮಣ ಇದೆಯೋ ಅಥವಾ ಇಲ್ಲ ಎಂದು ಖಚಿತಪಡಿಸಿಕೊಳ್ಳಲು ನ್ಯಾಯಾಲಯದಿಂದ ಕಮೀಷನರ್ ಅನ್ನು ನೇಮಕ ಮಾಡಲು ನನ್ನದು ಯಾವುದೇ ಆಕ್ಷೇಪಣೆ ಇರುವುದಿಲ್ಲ. ವಾದಿಯವರಿಗೆ ಸಂಬಂಧಪಟ್ಟ ಸ.ನಂ. 188 ಹಿಸ್ಸಾ 2 ರ ಪೂರ್ವ ದಿಕ್ಕಿನ ನಾನು ಅತೀಕ್ರಮಣ ಮಾಡಿರುವಂತಹ 5 ಗುಂಟೆ ಜಾಗವನ್ನು ವಾದಿಯವರಿಗೆ ವಾಪಸು ಕೊಡಲು ನಾನು ಬದ್ದನಾಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನ್ಯಾಯಾಲಯದಿಂದ ಕೋರ್ಟ ಕಮೀಷನರ್ ನೇಮಕ ಮಾಡಿ ನಾನು ಜಾಗವನ್ನು ಅತೀಕ್ರಮಣ ಮಾಡಿದ್ದೆನು ಎಂದು ಖಚಿತಪಟ್ಟಲ್ಲಿ ಅದನ್ನು ಬಿಟ್ಟುಕೊಡಲು ಬದ್ದನಾಗಿರುತ್ತೇನೆ. ನಿ.ಡಿ. 5 ಮತ್ತು ಇತರ ನಕಾಶೆಗಳು ಈ ಪ್ರಕರಣವನ್ನು ನಿರ್ಣಯಿಸಲು ಸಂಬಂಧಪಟ್ಟ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನಾನು ವಾದಿಯವರ ಜಾಗವನ್ನು ಅತೀಕ್ರಮಣ ಮಾಡಿ ಸದರಿ ವಿಷಯವನ್ನು ಮರೆಮಾಚಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ